412 (505) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಸಂಪರ್ಕ ಯೋಜನೆಯ ಧ್ಯೇಯೋದ್ದೇಶಗಳೇನು,

ಆ) ಈ ಯೋಜನೆಯಡಿ ಬೆಳ್ತಂಗಡಿ ತಾಲ್ಲೂಕಿನ ಯಾವ ಯಾವ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಯೋಜನೆಯನ್ನು ರೂಪಿಸಲಾಗಿದೆ,

ಇ) ಯೋಜನೆಯ ಅನುಷ್ಠಾನಕ್ಕಾಗಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದ ಪ್ರಸ್ತಾವನೆಗಳು ಸಲ್ಲಿಸಲ್ಪಟ್ಟಿವೆಯೇ,

ಈ) ಹೌದಾದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು,

ಉ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಎಂದಿನಿಂದ ಕೆಲಸ ಆರಂಭಿಸಲಾಗುವುದು ಹಾಗೂ ಈ ಉದ್ದೇಶಕ್ಕಾಗಿ ಮೀಸಲಿರಿಸಿದ ಹಣದ ಮೊತ್ತ ಎಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಮುಖ್ಯ ಧ್ಯೇಯೋದ್ದೇಶಗಳು ಈ ಕೆಳಕಂಡಂತಿದೆ

1 5 ವರ್ಷದೊಳಗೆ ವಿದ್ಯುತ್ ಇಲ್ಲದ ಎಲ್ಲಾ ಗ್ರಾಮೀಣ ಗೃಹ ವಸತಿಗಳು ವಿದ್ಯುತ್ ಪಡೆಯಲು ಅನುಕೂಲವಾಗುವಂತೆ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು

2 ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳು ವಾಸಿಸುವ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು

3 ಪ್ರತಿಯೊಂದು ಗ್ರಾಮ ಮತ್ತು ಜನವಸತಿ ಪ್ರದೇಶದಲ್ಲಿ ಕನಿಷ್ಠ ಒಂದು ವಿತರಣಾ ಟ್ರಾನ್ಸ್ ಫಾರ್ಮರ್ ಅಳವಡಿಸಿ ಮೂಲಭೂತ ವಿದ್ಯುತ್ ಸೌಕರ್ಯ ಕಲ್ಪಿಸುವುದು

4 ಶಾಲೆ, ಪಂಚಾಯತ್ ಕಛೇರಿ, ಸಮುದಾಯ ಭವನ, ಸರ್ಕಾರಿ ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳು ಇತ್ಯಾದಿ ಸಾರ್ವಜನಿಕ ಉಪಯೋಗ ಸ್ಥಳಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಿಕೆ

5 ಗ್ರಾಮೀಣ ಪ್ರದೇಶಗಳಿಗೆ ವಿಶ್ವಸನೀಯ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜನ್ನು ಒದಗಿಸುವುದು

ಆ) ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನ 80 ಗ್ರಾಮಗಳಲ್ಲಿನ ಪ್ರದೇಶಗಳನ್ನು ವಿದ್ಯುದೀಕರಣಕ್ಕಾಗಿ ಗುರುತಿಸಲಾಗಿದೆ ಈ ಗ್ರಾಮಗಳ ಹೆಸರುಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಇ) ಮತ್ತು ಈ) ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಅನುಷ್ಠಾನಕ್ಕಾಗಿ ಸಂಬಂಧಪಟ್ಟ ಗ್ರಾಮಪಂಚಾಯತ್‌ಗಳಿಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆಯ ಮಾರ್ಗಸೂಚಿಯಂತೆ ಜನಗಣತಿ 2001ರ ಅನ್ವಯ ಯೋಜನಾ ವರದಿಯನ್ನು ತಯಾರಿಸಿ ಪ್ರಸ್ತಾವನೆಯನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಗ್ರಾಮೀಣ ವಿದ್ಯುದ್ದೀಕರಣ ನಿಗಮಕ್ಕೆ ಸಲ್ಲಿಸಿತ್ತು ಈ ಪ್ರಸ್ತಾವನೆಗೆ ಗ್ರಾಮೀಣ ವಿದ್ಯುದ್ಧೀಕರಣ ನಿಗಮವು ಅನುಮೋದನೆಯನ್ನು ನೀಡಿರುತ್ತದೆ

ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನ 80 ಗ್ರಾಮಗಳ 1013 ಜನವಸತಿ ಪ್ರದೇಶಗಳ 669 ಬಡತನ ರೇಖೆಗಿಂತ ಕೆಳಗಿರುವವರ ಕುಟುಂಬಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಟೆಂಡರಿನ ಮೌಲ್ಯ ಮಾಪನವು ಪ್ರಗತಿಯಲ್ಲಿದೆ

ಉ) ಸದರಿ ಯೋಜನೆಯಡಿಯಲ್ಲಿ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಲು ಒಟ್ಟಾರೆಯಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯವಾಗುವಂತೆ ರೂ 24 59 ಕೋಟಿ ಮೊತ್ತದ ಯೋಜನೆಗೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಅನುಮೋದನೆ ದೊರೆತಿರುತ್ತದೆ ಅದರಲ್ಲಿ ಬೆಳ್ತಂಗಡಿ ತಾಲ್ಲೂಕಿನ ಯೋಜನಾ ಮೊತ್ತವು ರೂ 4 30 ಕೋಟಿ ಆಗಿರುತ್ತದೆ ಈ ಬಗ್ಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನ ಮೌಲ್ಯ ಮಾಪನವು ಪ್ರಗತಿಯಲ್ಲಿದೆ ಮುಂದಿನ ಆರ್ಥಿಕ ವರ್ಷವಾದ 2007–08 ರಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಉದ್ದೇಶಿಸಿದೆ

LC-1

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಕೆ ವಸಂತ ಬಂಗೇರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 505ಕ್ಕೆ ಅನುಬಂಧ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಳಗೊಂಡಿರುವ ಗ್ರಾಮಗಳ ಹೆಸರುಗಳು

ಕ್ರ.ಸಂ	ಗ್ರಾಮ	ಕ್ರ.ಸಂ	ಗ್ರಾಮ
1	ಲ್ಯಾಲ	2	ಸವಣಾಲು
3	ಒಡಿಲ್ನಾಲ	4	ಬಂದಾರು
5	ಇಳಂತಿಲ	6	ಇಂದಬೆಟ್ಟು
7	ಕಣಿಯೂರು	8	ಕನ್ಯಾಡಿ
9	ಕರಾಯ	10	ಕೊಯ್ಯಾರು
11	ನಡ	12	ನ್ಯಾಯತರ್ದು
13	ಉರುವಾಲು	14	ನಾವೂರು
15	ಕುವೆಟ್ಟು	16	ಕಡಿರುದ್ಯಾವರ
17	ಮಲವಂತಿಗೆ	18	ಮಿತ್ತಬಾಗಿಲು
19	ಮೊಗ್ರು	20	ಕಲಿಯ
21	ಮೇಲಂತಬೆಟ್ಟು	22	ಮಾಲಾಡಿ
23	ಸೋಣಂದೂರು	24	ಮುಂಡೂರು
25	ಕುದ್ಯಾಡಿ	26	ಕುಕ್ಕಲ
27	ಪಾರೆಂಕಿ	28	ಸುಲ್ಕೇರಿ
29	ಬಾರ್ಯ	30	ಪುತ್ತಿಲ
31	ತಣ್ಣೀರುಪಂತ	32	ತೆಕ್ಕಾರು
33	ಬಳಂಜ	34	ಮಚ್ಚಿನ
35	ಕರಂಬಾರು	36	ನಾಲ್ಕೂರು
37	ಬಡಗಕಾರಂದೂರು	38	ಪದಂಗಡಿ
39	ಪಿಲ್ಯಾ	40	ಗರ್ಡಾಡಿ
41	ನಾವರ	42	ತೆಂಕ ಕಾರಂದೂರು
43	ಸುಲ್ಕೇರಿ ಮೊಗರು	44	ಧರ್ಮಸ್ಥಳ

45	ಕಳಂಜ	46	ಕೊಕ್ಕಡ
47	ನಿಡ್ಲೆ	48	ಪಟ್ರಮೆ
49	ಪುದುವೆಟ್ಟು	50	ರೆಕ್ಕಾ
51	ಶಿಬಾಜೆ	52	ಶಿಶಿಲ
53	ಹತ್ಯಡ್ಕ	54	ಶಿರ್ಲಾಲು
55	ಬಡಕೋಡಿ	56	ಅಂಡಿಂಜೆ
57	ಅರಂಬೋಡಿ	58	ಬಜಿರೆ
59	ಗುಂಡೂರಿ	60	ಹೊಸಂಗಡಿ
61	ಕರಿಮನೇಲು	62	ಕಾಶಿಪಟ್ಟಣ
63	ಕೊಕ್ಕಾಡಿ	64	ಮಾರೋಡಿ
65	ಮೂಡುಕೋಡಿ	66	ನಾರಾವಿ
67	ನಿಟ್ಟಡೆ	68	ಪೆರಾಡಿ
69	ಕುಕ್ಕೇಡಿ	70	ಕತ್ತೂರು
71	ಸಾವ್ಯ	72	ವೇಣೂರು
73	ಚಾರ್ಮಾಡಿ	74	ಚಿಬಿದ್ರೆ
75	ನೆರಿಯಾ	76	ಮುಂಡಾಜೆ
77	ಕಲ್ಮಂಜ	78	ಬೆಳಾಲ್
79	ಉಜಿರೆ	80	ತೋಟತ್ತಡಿ

413 (34) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಕುಡಿಯುವ ನೀರಿನ ಯೋಜನೆ ಈಗ ಯಾವ ಹಂತದಲ್ಲಿದೆ,

ಆ) ಈ ಕಾಮಗಾರಿಯು ಯಾವಾಗ ಮುಗಿಯಬೇಕಿತ್ತು ಮತ್ತು ಯಾವಾಗ ಮುಗಿಯುತ್ತದೆ,

ಇ) ಈ ಯೋಜನೆಯಲ್ಲಿ ನೀರು ಸರಬರಾಜು ವಿತರಣಾ ಮಾರ್ಗವನ್ನು ಅಳವಡಿಸಲಾಗಿದೆಯೇ,